**SCCH-21**
**MVC 954-2020**
**RW:1**

**ದಿನಾಂಕಃ 16-03-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು**

**ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ದಿನಾಂಕ 02-02-2020 ರಂದು ನಾನು ಕೆಎ-40-ಎಫ್-1149 ರ ಬಸ್ಸನ್ನು ಬೆಂಗಳೂರಿನಿಂದ ಮದನಪಲ್ಲಿ ಕಡೆಗೆ ಚಲಾಯಿಸುತ್ತಿದ್ದೇನು. ಬೆಂಗಳೂರು ಹಾಗೂ ಮದನಪಲ್ಲಿ ಮಧ್ಯದಲ್ಲಿ ಸಂಜೆ 7 ಗಂಟೆ ಸಮಯದಲ್ಲಿ ಅಪಘಾತವಾಯಿತು. ರಸ್ತೆಯ ಪಕ್ಕದಲ್ಲಿ ನಿಂತಿದ್ದ ಮೃತನಿಗೆ ನಾನೇ ಅತಿ ವೇಗವಾಗಿ ಬಸ್ಸನ್ನು ಚಲಾಯಿಸಿ ಡಿಕ್ಕಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಡಿವೈಡರ್ ಪಕ್ಕದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಮೃತರು ರಸ್ತೆ ದಾಟುವ ಸಲುವಾಗಿ ಡಿವೈಡರ್ ಪಕ್ಕ ನಿಂತಿದ್ದಾಗ ನಾನು ಅಪಘಾತ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನೇ ಆಸ್ಪತ್ರೆಗೆ ಮೃತರನ್ನು ಸೇರಿಸಿದ್ದೇನು. ಅಪಘಾತವಾದ ದಿನವೇ ಪೋಲಿಸರು ನಮ್ಮ ಬಸ್ಸನ್ನು ಜಪ್ತಿ ಮಾಡಿರುತ್ತಾರೆ. ನಾನು ಪೋಲಿಸರಿಗೆ ನನ್ನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ದೂರನ್ನು ನೀಡಿರುವುದಿಲ್ಲ. ಅಂತಿಮ ವರದಿ ನನ್ನ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ ಹೇ ಕೇ ಸ ಇದೆ**

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು